# ಸ್ತೋತ್ರಪಠನ ದರ್ಶನ

ಸ್ವಾಮಿ ಹರ್ಷಾನಂದ

**ಆಧ್ಯಾತ್ಮಿಕ ಜೀವನದಲ್ಲಿ ಸ್ತೋತ್ರಪಾಠದ ಮಹತ್ವವನ್ನು ತಿಳಿಸಿಕೊಟ್ಟಿರುವ ಪರಮಪೂಜ್ಯ ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಅಗಾಧ ಪಾಂಡಿತ್ಯವುಳ್ಳ ಸ್ವಾಮೀಜಿಯವರು ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ.**

ಉದರಬಾಧೆಯಿಂದ ಬಹುಕಾಲ ನರಳುತ್ತಿದ್ದ ಭಗವದ್ಭಕ್ತರೊಬ್ಬರು ಎಲ್ಲ ಔಷಧೋಪಚಾರಗಳನ್ನೂ ನಿರ್ದಾಕ್ಷಿಣ್ಯವಾಗಿ ತ್ಯಜಿಸಿ 'ವಿಷ್ಣುಸಹಸ್ರನಾಮ'ದ ಪಠನವನ್ನು ಮೊರೆಹೊಕ್ಕರು. ಹಲವು ವರ್ಷಗಳಿಂದ ಉಪದ್ರವವೀಯುತ್ತಿದ್ದ ಆ ಬಾಧೆಯು ಬಹುಬೇಗ ದೂರವಾಯಿತು.

ಇದು ವ್ಯಾವಹಾರಿಕ ಜೀವನದಲ್ಲಿ ಆಗಿದ್ದ – ಆಗಬಹುದಾದ – ಪ್ರಯೋಜನ.

ಒಂದು ಆಸನದಲ್ಲಿ ಕುಳಿತು ಜಪಧ್ಯಾನಾದಿಗಳನ್ನು ಮಾಡಿದ ನಂತರ ಕೂಡಲೇ ಏಳದೇ ಅಲ್ಲಿಯೇ ಸ್ವಲ್ಪಕಾಲ ಸ್ತೋತ್ರಪಾಠವನ್ನು ಮಾಡಿದರೆ ಮನಶ್ಶಾಂತಿಯು ಮತ್ತಷ್ಟು ಕಾಲ ಮುಂದುವರಿಯಲು ಸಹಾಯವಾಗುತ್ತದೆ ಎಂಬುದು ಸಾಧುಸಜ್ಜನರ ಉಪದೇಶ.

ಇದು ಸಾಧಕರ ಜೀವನದಲ್ಲಿ ಸಾಧಿತವಾಗಿರುವ ಸತ್ಯ.

ದೈನಂದಿನ ಜೀವನದಲ್ಲಿ ವಿಪತ್ತು ಬಂದಿರುವಾಗ ಕವಚ–ರಕ್ಷಾದಿ ಸ್ತೋತ್ರಗಳನ್ನು ವ್ಯಾಕುಲತೆಯಿಂದ ಪಠಿಸಿ ಪಾರಾಗಿರುವವರ ಸಂಖ್ಯೆಯೇನೂ ಅಲ್ಪವಲ್ಲ.

ಇದು ತುರ್ತುಪರಿಸ್ಥಿತಿಯಲ್ಲಿ ಒದಗಿಬಂದಿರುವ ಅನಿರೀಕ್ಷಿತ ಸಹಾಯ.

ಎಂದಮೇಲೆ ಇಂದಿಗೂ – ಆಧುನಿಕ ವಿಜ್ಞಾನ ತಂತ್ರಜ್ಞಾನದ ಈ ಯುಗದಲ್ಲಿಯೂ – ಸ್ತೋತ್ರಸಾಹಿತ್ಯ ಪಠನವು ಅತ್ಯಂತ ಪ್ರಭಾವಶಾಲಿ ಪರಿಣಾಮ ಬೀರುತ್ತದೆ ಎಂದಾಯಿತು.

ಎಂದಮೇಲೆ ಪ್ರತಿಯೊಂದು ಸಮಸ್ಯೆಗೂ ತತ್ಕ್ಷಣದ ಪರಿಹಾರವನ್ನು ಬಯಸುವ ಈ ಆಧುನಿಕಯುಗದ ಮಾನವನಿಗೂ ನಾವು ಈ ಪ್ರಾಚೀನ – ಆದರೆ ಅತ್ಯಂತ ಪ್ರಭಾವಯುತ ಪರಿಹಾರಮಾರ್ಗವನ್ನು ಸೂಚಿಸುವುದರಲ್ಲಿ ತಪ್ಪೇನೂ ಇಲ್ಲ!

ಎಂದಮೇಲೆ, ಈ ಸ್ತೋತ್ರಸಾಹಿತ್ಯವನ್ನು ಕುರಿತು ಸ್ವಲ್ಪ ವಿವೇಚನೆ – ವಿಶ್ಲೇಷಣೆಯ ಮೂಲಕ ಅಧ್ಯಯನ ಮಾಡುವುದು ಒಳಿತಲ್ಲವೇ?

ಇಲ್ಲಿ ಮತ್ತೊಂದು ವಿಷಯವನ್ನು ಮೊದಲೇ ಸ್ಪಷ್ಟಪಡಿಸಬೇಕು! ಸ್ತೋತ್ರಸಾಹಿತ್ಯವೆಂದರೆ, ಇಲ್ಲಿ ಸಂಸ್ಕೃತದಲ್ಲಿರುವ ಸ್ತೋತ್ರಗಳನ್ನು ಮಾತ್ರ ಪರಿಗಣಿಸುತ್ತೇವೆ. (ದೇಶಭಾಷೆಗಳಲ್ಲಿರುವ ಸಾಹಿತ್ಯವನ್ನು ಭಕ್ತಿಗೀತೆಯೆಂತಲೋ ಭಜನೆಯೆಂತಲೋ ನಿರ್ದೇಶಿಸುತ್ತೇವೆ.)

ಈ ಸಾಹಿತ್ಯವನ್ನು ಎರಡು ಭಾಗವಾಗಿ ವಿಂಗಡಿಸಬಹುದು:

ಶ್ರುತಿಸ್ಮೃತಿ–ಇತಿಹಾಸ–ಪುರಾಣಗಳಲ್ಲಿ ಬರುವ, ಸುಪ್ರಸಿದ್ಧ ಋಷಿಮುನಿಗಳಿಂದ ಪ್ರಣೀತವಾದವು ಮೊದಲ ಗುಂಪಿಗೆ ಸೇರಿದವು. ಇವು ಸ್ಫೂರ್ತಿಜನಿತ, ಆದ್ದರಿಂದಲೇ ಸ್ಫೂರ್ತಿದಾಯಕ. ಇವುಗಳಲ್ಲಿ **ಆದಿತ್ಯಹೃದಯ, ವಿಷ್ಣುಸಹಸ್ರನಾಮ**ಗಳಂತಹ ಕೆಲವು, ವೇದಮಂತ್ರಗಳಿಗೆ ಸರಿಸಮಾನವಾದ ಸ್ಥಾನವನ್ನು ಗಳಿಸಿಕೊಂಡಿವೆ ಎನ್ನಬಹುದು.

ಶಂಕರಭಗವತ್ಪಾದರಂತಹ ಆಚಾರ್ಯಪುರುಷರಿಂದ ರಚಿತವಾಗಿರುವವು ಎರಡನೆಯ ಗುಂಪಿಗೆ ಸೇರಿದವು. ಇವುಗಳಲ್ಲಿಯೂ **ಸೌಂದರ್ಯಲಹರಿ**ಯಂಥ ಕೆಲವು ಮೊದಲನೆಯ ಗುಂಪಿಗೆ ಸೇರುವ ಯೋಗ್ಯತೆಯನ್ನು ಪಡೆದಿದ್ದರೂ ಹೆಚ್ಚಿನವು ಪಾಂಡಿತ್ಯಪ್ರೇರಿತ, ಆದುದರಿಂದಲೇ ಬುದ್ಧಿಪ್ರಚೋದಕ. ಇವುಗಳಲ್ಲಿ ಅಧಿಕಾಂಶ ಸಂಸ್ಕೃತಸಾಹಿತ್ಯಕ್ಷೇತ್ರಕ್ಕೆ ಸೇರುವಂಥವು.

ನಾವು ಮಾಡುತ್ತಿರುವ ಸ್ತೋತ್ರಸಾಹಿತ್ಯ ಸಮೀಕ್ಷೆಯು ಕೇವಲ ಭಕ್ತರು, ಆಧ್ಯಾತ್ಮಿಕ ಸಾಧಕರ ದೃಷ್ಟಿಕೋನದಿಂದ. ಈ ಪ್ರಕಾರದಲ್ಲಿ ಸ್ತೋತ್ರಗಳನ್ನು ಹಲವು ವಿಭಾಗವಾಗಿ ವಿಂಗಡಿಸಬಹುದು:

೧. **ನಿರ್ಗುಣ ನಿರಾಕಾರಬ್ರಹ್ಮದ ತಾತ್ತ್ವಿಕ ವಿವರಣೆ.**

೨. **ಸಗುಣ ಸಾಕಾರ ಬ್ರಹ್ಮದ ಅಭಿವ್ಯಕ್ತಿಗಳಾದ ವಿವಿಧ ದೇವದೇವಿಯರ ರೂಪ–ಗುಣಗಳ ಮಹಿಮೆಗಳ ವರ್ಣನೆ.**

೩. **ಭಕ್ತನ ಶೋಚನೀಯ ಅವಸ್ಥೆಯ ವಿವರಣೆ ಮತ್ತು ಭಗವತ್ಕೃಪೆಗಾಗಿ ಕಳಕಳಿಯ ಪ್ರಾರ್ಥನೆ.**

೪. **ವಿವಿಧ ಆಶೆಗಳ ಪೂರೈಕೆಗಾಗಿ ಬೇಡಿಕೆ.**

೫. **ಸಾಧಕರಿಗೆ ಉಪಯುಕ್ತವಾಗುವ ಉಪದೇಶಗಳು.**

ಇವುಗಳಲ್ಲಿ ಮೊದಲನೆಯದು ತೀಕ್ಷ್ಣಬುದ್ಧಿಯವರಿಗಾಗಿ ಮಾತ್ರ ಮೀಸಲು. ನಾಲ್ಕನೆಯದನ್ನು ದೂರವಿಡಬೇಕು. ಮೂರನೆಯ ಆವಶ್ಯಕತೆ ಕೆಲವೊಮ್ಮೆ ಬರಬಹುದು. ಆದುದರಿಂದ ಎರಡನೆಯ ಮತ್ತು ಕಡೆಯ ವರ್ಗದ ಸ್ತೋತ್ರಗಳೇ ನಮಗೆ ಹೆಚ್ಚು ಪ್ರಿಯವಾಗುವಂಥವು. ಎಂತಲೇ ಅವನ್ನು ಹೆಚ್ಚು ಹೆಚ್ಚಾಗಿ ಕಲಿಸುವ ಮತ್ತು ಪಠಿಸುವ ಆವಶ್ಯಕತೆ ತುಂಬಾ ಇದೆ.

ಇತ್ತೀಚಿನ ದಿನಗಳಲ್ಲಿ ಸ್ತೋತ್ರಪಠನ ಸಂಪ್ರದಾಯದಲ್ಲಿ ಒಂದು ಹೊಸ ಬೆಳವಣಿಗೆಯನ್ನು – ಅದನ್ನು ಸತ್ಕ್ರಾಂತಿಯೆಂದೇ ಕರೆಯಬಹುದು – ಕಾಣುತ್ತಿದ್ದೇವೆ. ಅದೇ ಸಾಮೂಹಿಕಪಠನ. ದೇವಮಂದಿರದಂತಹ ಪವಿತ್ರ ವಾತಾವರಣದಲ್ಲಿ ನೂರಾರುಜನ ಶ್ರದ್ಧಾವಂತ ಭಕ್ತರು ಕುಳಿತು ಸುಪ್ರಸಿದ್ಧಸ್ತೋತ್ರವೊಂದನ್ನು ಏಕಕಂಠದಿಂದ, ತಪ್ಪಿಲ್ಲದೆ ಸುಶ್ರಾವ್ಯವಾಗಿ ಗಾನರೂಪದಲ್ಲಿ ಪಠಿಸಿದರೆ **'ಕಲಿಯುಗ ದ್ವಾಪರವಾಗುವುದು'**. ಇದರಿಂದುಂಟಾಗುವ ಸ್ಪಂದನವು ಅಪ್ರಯತ್ನವಾಗಿಯೇ ಹಾಡುವವರ ಮತ್ತು ಕೇಳುವವರ ಮನಸ್ಸುಗಳನ್ನು ಶಾಂತಿಧಾಮಕ್ಕೊಯ್ಯುತ್ತದೆ ಎಂಬುದು ಅನುಭವವೇದ್ಯ ಸತ್ಯ. ಈ ಸಂಪ್ರದಾಯವನ್ನು ಬೆಳೆಸುವುದು ಮತ್ತು ಅದರ ಪವಿತ್ರತೆ–ಪರಿಣಾಮಗಳನ್ನು ಕಾಪಾಡಿಕೊಂಡುಬರುವುದು ನಮ್ಮೆಲ್ಲರ ಕರ್ತವ್ಯ.